ಆಧ್ಯಾತ್ಮಿಕ ಆಶಾಕಿರಣಗಳು ಭಾಗ – ೩

ವಿಷ್ಣುದೀಕ್ಷೆ – ವಿಷ್ಣುದೀಕ್ಷೆ ಪಡೆದ ಮನುಷ್ಯನು ಲೋಕದಲ್ಲಿ ಮಾನ್ಯನಾಗುತ್ತಾನೆ. ಕೇವಲ ದೀಕ್ಷೆ ಇದ್ದರೆ ಸಾಲದು ಸತ್ಯ ಶೌಚಾದಿಗಳು ಅವಶ್ಯಕ ಎಂದು ತಿಳಿಸುತ್ತಾರೆ –

"ಸ್ವಸ್ವವರ್ಣಾಶ್ರಮಾಚಾರ ನಿರತಃ ಸತ್ಯವಾಕ್‌ಶುಚಿಃ ।
ಸಏವಲಭತೇ ಸರ್ವಂ ದೀಕ್ಷಾಗ್ರಹಣಜಂ ಫಲಂ " ॥ ೭–೫೧ ॥ (ವಿ. ರ.)

"ವಿಷ್ಣುದೀಕ್ಷೆ ಪಡೆದವನು ಸ್ವವರ್ಣ – ಆಶ್ರಮಕ್ಕೆ ಯೋಗ್ಯವಾದ ಕ್ರಮಗಳಲ್ಲಿ ನಿತ್ಯ ನಿರತನಾಗಿಯೂ, ಸತ್ಯಭಾಷಿಯೂ ಕಾಯಾ ವಾಚಾ ಮನಸಾ ಶುಚಿರ್ಭೂತನಾಗಿಯೂ ಇದ್ದರೆ ಮಾತ್ರ ವಿಷ್ಣುದೀಕ್ಷೆಯಿಂದಾಗುವ ಪೂರ್ಣಫಲಗಳನ್ನು ಹೊಂದುತ್ತಾನೆ."

ಸರ್ವದೀಕ್ಷೆಗಳಲ್ಲಿ ವಿಷ್ಣುದೀಕ್ಷೆಯೇ ಮೇಲು ಏಕೆಂದರೆ ವಿಷ್ಣುವೇ ಸಕಲ ದೇವ ಋಷಿ, ಗಂಧರ್ವ, ಮನುಷ್ಯಾದಿಗಳಿಗೆ ಆರಾಧ್ಯದೇವತೆಯು, ಸರ್ವಸ್ವಾಮಿಯು, ಸ್ವತಂತ್ರನು, ಪೂರ್ಣನು, ಸರ್ವನಿಯಾಮಕನು ಆಗಿದ್ದಾನೆ. ಆದ್ದರಿಂದ ಅವನಲ್ಲಿ ಮಾಡಿದ ಉತ್ಕೃಷ್ಟ ಭಕ್ತಿಯು ಮುಕ್ತಿಗೆ ಕಾರಣವಾಗುತ್ತದೆ.

ತಪ್ತ ಮುದ್ರಾಧಾರಣ –

ತಪ್ತಮುದ್ರೆಯ ವೈಶಿಷ್ಟ್ಯವನ್ನು ದಾರ್ಢ್ಯಪೂರ್ವಕ ತಿಳಿಸುತ್ತಾರೆ.

"ತಪ್ತಚಕ್ರಾಂಕಿತೋಯಃ ಸ್ಯಾತ್ ಸ ಚಂಡಾಲೋವರೋಭವೇತ್ ।
ಕಿಂಪುನ ಬ್ರಾಹ್ಮಣಾಪುಣ್ಯಾಃ ಸದಾಚಾರಾ ವಿಶೇಷತಃ " ॥ ೭–೬೧ ॥

"ತಪ್ತ ಚಕ್ರಾಂಕಿತ ದೇಹವುಳ್ಳ ಚಂಡಾಲನೂ ಸಹ, ಅದೀಕ್ಷಿತ ಉತ್ತಮ ವರ್ಣದವರಿಗಿಂತ ದರ್ಶನಾದಿಗಳಿಗೆ ಪ್ರಶಸ್ತನಾಗಿರುವಾಗ, ತಪ್ತಚಕ್ರಾದಿ ಚಿಹ್ನೆಗಳುಳ್ಳ ಪುಣ್ಯವಂತರಾದ ಬ್ರಹ್ಮಣರು ಅದರಲ್ಲಿಯೂ ವಿಶೇಷವಾಗಿ ಸದಾಚಾರ ನಿಷ್ಠರಾದವರು (ದೇವಪಿತೃ ಕಾರ್ಯದಲ್ಲಿ ದಾನಾದಿಗಳಿಗೆ ಶ್ರೇಷ್ಠ ಪಾತ್ರರೆಂದು) ಉತ್ತಮರು ದರ್ಶನೀಯರೆಂದು ಪ್ರತ್ಯೇಕ ಹೇಳಲೇನಿದೆ".

ವಿಷ್ಣು ದೀಕ್ಷೆ ಪಡೆದವರು ವಿಷ್ಣುವಿನ ಪ್ರಸನ್ನತೆಗಾಗಿ ಆತನ ನಾಮ ಮಂತ್ರಗಳನ್ನು ಜಪಮಾಡುವದು ಸಹಜ.

ಮಂತ್ರಜಪ –

ತೀವ್ರ ಶಿಷ್ಟಾಚಾರ ಶುಚ್ಯಾದಿವ್ರತರು, ಅಗ್ನಿಹೋತ್ರ, ವೇದಾಧ್ಯಯನ, ಪ್ರಾಣಾಯಾಮ ಪರಾಯಣರೂ, ಪರಪೀಡಾ ಪರದ್ರವ್ಯವಿಮುಖರೂ, ಕ್ರೋಧಾದಿ ರಹಿತರು, ಇಂದ್ರಿಯಜಯ ಉಳ್ಳವರು, ದೇವದ್ವಿಜರಲ್ಲಿ ಭಕ್ತಿಯುಳ್ಳವರು, ಉಕ್ತ ಉಪವಾಸ ಪರಾಯಣರೂ ನರಸಿಂಹ, ಹಯಗ್ರೀವ, ವರಾಹ, ಪರಶುರಾಮಾದಿ ಮಂತ್ರಗಳನ್ನು ಜಪಿಸಬಹುದು. ಆದರೆ ಶಿಷ್ಟಾಚಾರ ರಹಿತರು, ದುರಾಚಾರಿಗಳು ಈ ಮಂತ್ರವನ್ನು ಜಪಿಸಿದರೆ ಕಾಲಾಂತರದಲ್ಲಿ

ದುಷ್ಫಲಗಳುಂಟಾಗದೆ ಇರದು.

ಆಧುನಿಕ ದಿನಗಳಲ್ಲಿ ಜೀವನ ನಿರ್ವಹಣೆಗಾಗಿ ವಿವಿಧ ಕ್ಷೇತ್ರಗಳಲ್ಲಿ ಕಾರ್ಯಾಸಕ್ತರಾದಾಗ ಆಚಾರಾದಿಗಳಲ್ಲಿ ಸಡಿಲ ಪರಿಸ್ಥಿತಿ ಉಂಟಾದಾಗ ಅಥವಾ ಧರ್ಮಮಾರ್ಗದಲ್ಲಿ ಹೆಚ್ಚಿನ ರಿಯಾಯಿತಿ ಬೇಕಾದಾಗ, ಆಸ್ತಿಕ ಜನರು ಮಂತ್ರಜಪಿಸುವುದನ್ನೇ ಬಿಡಬಾರದು. ದೀಕ್ಷಾ ಉಪದೇಶಗಳನ್ನು ಸ್ವೀಕಾರ ಮಾಡಿ ರಾಮ, ಕೃಷ್ಣ, ಗೋಪಾಲ, ಹರಿ, ದಾಮೋದರಾದಿ ಸೌಮ್ಯವಾದ ನಾಮಮಂತ್ರಗಳನ್ನು ಜಪಮಾಡಿ ಶ್ರೀಹರಿ ಪ್ರಸಾದಕ್ಕೆ ಪಾತ್ರರಾಗಬಹುದು ದುಷ್ಫಲವಾಗುವುದಿಲ್ಲ.

ಆಹಾರಾದಿಗಳ ನಿಯಮೋಲ್ಲಂಘನೆ ಮಾಡಿದವರು (ಅಭಕ್ಷ್ಯ ಭಕ್ಷಣ ಅಪೇಯ ಪಾನಾದಿಗಳಲ್ಲಿ ನಿರತರು) ದೃಢವಾದ ಅಂತಃ ಶ್ರದ್ಧೆ ಒಡಮೂಡಿದಾಗ ನಿಷಿದ್ಧಗಳನ್ನು ತ್ಯಾಗಮಾಡಿ ಪ್ರಾಯಶ್ಚಿತ್ತಾದಿಗಳೊಡನೆ ಸೌಮ್ಯಮಂತ್ರ ಸ್ವೀಕಾರ ವಿಷ್ಣು ದೀಕ್ಷೆಗಳನ್ನು ಪಡೆಯಬಹುದು. ಪಾಪ ಪರಿಹರಿಸಿಕೊಳ್ಳಲು ವಿಷ್ಣು ಮಹಿಮಾ ಶ್ರವಣ ಮನನಾದಿಗಳೇ ಮುಖ್ಯ ಉಪಾಯ.

ಮುಖ್ಯಪ್ರಾಣ ಭಕ್ತಿ –
ತತ್ವಾಭಿಮಾನಿ ದೇವತೆಗಳಲ್ಲಿ ಶ್ರೀಮುಖ್ಯಪ್ರಾಣನು ಶ್ರೇಷ್ಠನು.
"ಅಥತ್ವಮಸಿ ನೋನಾಥಸ್ತ್ವದ್ದಾಸಾ ಅಖಿಲಾವಯಂ" (೧೮–೧೭)

ದೇವತೆಗಳೆಲ್ಲರೂ ಸ್ಪರ್ಧಿಸಿದ ನಂತರ ಕೊನೆಗೆ ಎಲ್ಲರೂ ಮುಖ್ಯ ಪ್ರಾಣನನ್ನು ಕುರಿತು ಹೇಳುತ್ತಾರೆ. "ಹೇ, ಪ್ರಾಣ, ನೀನೇ ನಮ್ಮೆಲ್ಲರ ಸ್ವಾಮಿಯು ನಾವೆಲ್ಲರೂ ನಿನ್ನ ದಾಸರು."

ಮುಖ್ಯ ಪ್ರಾಣನ ಮಹಿಮಾ ತಿಳಿಯುವುದು ಅವಶ್ಯಕವಿದೆ. ಆತನು ಸಕಲ ಜೀವರಿಗೆ ಚೇಷ್ಟಾಪ್ರದನು. ಅವನಿಂದಲೇ ಸ್ವಾಸೋಛ್ವಾಸ ಮತ್ತು ಜೀವನಗಳು ಪ್ರಾಪ್ತವಾಗುವವು. ಜೀವರನ್ನು ಅವರವರ ಕರ್ಮಾನುಸಾರ ದೇಹಾಂತರ ಹೊಂದಿಸುವವನು ಅವನೇ. ಪ್ರಳಯಕಾಲದಲ್ಲಿಯೂ ಕೂಡ ನಿದ್ರೆ, ಅಜ್ಞಾನಾದಿ ರಹಿತನಾದ್ದರಿಂದ ಈತನನ್ನು "ಪ್ರತಿಭಾತಪರಾವರ"ನೆನ್ನುತ್ತಾರೆ. ಸರ್ವ ಜೀವರಲ್ಲಿ ಶ್ವಾಸ ಮಂತ್ರ ಜಪಕರ್ತನು. ಜೀವರಿಗೆ ಬಲ, ಜ್ಞಾನ, ಧೈರ್ಯ, ಬುದ್ಧಿ, ಭಕ್ತಿ, ಶ್ರದ್ಧೆಗಳು ಈತನಿಂದಲೇ ಸಿಗುತ್ತವೆ. ಮುಖ್ಯಪ್ರಾಣನಿಗೆ ಚೇಷ್ಟಕನು ಶ್ರೀ ಹರಿಯು.

"ಬಲಂ ಜ್ಞಾನಂ ಧೃತಿರ್ಬುದ್ಧಿರ್ಭಕ್ತಿಶ್ರದ್ಧಾತ ಏವ ಹಿ ।
ಪ್ರಾಣಸ್ಯಾಸ್ಯಾಪಿ ಸಪ್ರಾಣಃ ಶ್ರೀವಿಷ್ಣುಃ ಸಕಲೇಶ್ವರಃ ॥
೧೮-೨೪ ॥ (ವಿ.ರ)

ಸರ್ವಕರ್ಮಗಳನ್ನು ಪ್ರಾಣಾಂತರ್ಯಾಮಿ ಶ್ರೀ ವಿಷ್ಣುವಿಗೆ ಸಮರ್ಪಣೆ ಮಾಡಬೇಕು. ದೃಢಭಕ್ತಿ ಮಾತ್ರದಿಂದ ವಿಷ್ಣು ಪ್ರಸಾದ ಲಭ್ಯ.

ಶ್ರೀ ಹರಿಗೇ ಶರಣು :

ಸಾಂಸಾರಿಕ ಜೀವರ ತ್ರಿವಿಧ ತಾಪಗಳ ಪರಿಹಾರಕ್ಕೆ ಶ್ರೀ ವಿಷ್ಣುವನ್ನು ಶರಣು ಹೊಂದುವುದೊಂದೇ ಪರಮೋಪಾಯ.

"ಯತ್ರೋದ್ವಿಗ್ನಾ ಇಮೇ ತಾಪೈಃ ಪ್ರಯಾತಾ ಶರಣಂ ಹರಿಂ"
೧೯-೧೭ (ವಿ.ರ.)

ಶರಣಾಗತಿಯ ಲಕ್ಷಣಗಳನ್ನು ಈ ಮೊದಲೇ ಹೇಳಿದೆ.

ವಿಷಯ ವೈರಾಗ್ಯದ ಅಭಾವವೇ ಸಂಸಾರದಲ್ಲಿ ದುಃಖ ಪರಂಪರೆಗೆ ಪ್ರಧಾನ ಕಾರಣ. ಅಭಿಮಾನವು ಜೀವರನ್ನು ಸಂಸಾರ ಚಕ್ರದಿಂದ ಬಂಧಿಸುತ್ತದೆ. ಜೀವರಿಗೆ ಈ ಸಂಸಾರ ಚಕ್ರವ್ಯೂಹದ ಒಳಗೆ ಪ್ರವೇಶ ಮಾತ್ರ ಗೊತ್ತು, ಆದರೆ ಬಹಿರ್ನಿರ್ಗಮನ ತಿಳಿದಿಲ್ಲ. ಶ್ರುತಿ ಸ್ಮೃತಿಗಳು ತಿಳಿಸಿದ ಮಾರ್ಗದಿಂದ ಹೊರಗೆ ಬರಬೇಕು. ಐಹಿಕಾಮುಷ್ಮಿಕ ಸುಖಾಪೇಕ್ಷೆಗಳನ್ನು ತ್ಯಜಿಸಿ ಕೇವಲ ಶ್ರೀ ವಿಷ್ಣು ಪ್ರೀತ್ಯರ್ಥವಾಗಿ ಶ್ರಮಿಸುವುದು ಅವಶ್ಯಕ.

ವಿಷ್ಣುಪುರಾಣ – ವಿಷ್ಣು ರಹಸ್ಯ ಗ್ರಂಥಗಳನ್ನು ನೋಡಿದರೆ, ವಿಷ್ಣ್ವಾರಾಧನೆಯ ವಿಷಯದಲ್ಲಿ ತಿಳಿದು ಮಾಡುವುದೇ ಹೆಚ್ಚಿಗೆ ಇದೆ. ಕಾಯೇನ, ವಾಚಾ, ಮನಸಾ ಮಾಡತಕ್ಕ ಸಾಧನಗಳಲ್ಲಿ, ಕಾಯೇನ ವಾಚಾ ಶೇಕಡಾ ೨೦% ರಷ್ಟು, ಮಾನಸಿಕ ಶೇಕಡಾ ೮೦ರಷ್ಟು. ತಿಳಿದು ಮಾಡುವ ಸಾಧನೆಗಳೆಲ್ಲ ಬಾಲ್ಯಾವಸ್ಥೆಯಲ್ಲಿ ಆಗಲಾರವು. ಆಗ ಕಾಯೇನ–ವಾಚಾ ಕರ್ಮಗಳು ಮಾತ್ರ ಆಗುತ್ತವೆ. ಆಗ ಮಾಡಿದ್ದೂ ಹರಿ ಪ್ರೀತಿಯೇ ಯಾಕೆಂದರೆ ಕಾಮ್ಯ ಕರ್ಮಗಳಲ್ಲಿ ವಿಷ್ಣು ಮಹಿಮಾ ಶ್ರವಣ–ಮನನಾದಿಗಳು, ಇಂದ್ರಿಯ ಜಯ, ಸ್ಥಿರಾಸನ ಪ್ರಾಣಾಯಾಮಗಳು, ಉಪೋಷಣ ವ್ರತಗಳು, ಜ್ಞಾನ, ಭಕ್ತಿ, ವೈರಾಗ್ಯ, ದಾರ್ಢ್ಯಾದಿಗಳು, ಸರ್ವಕರ್ಮ ಸಮರ್ಪಣೆ, ಉಕ್ತ ಅನುಸಂಧಾನಗಳು, ಇತ್ಯಾದಿಗಳೆಲ್ಲವೂ ಬುದ್ಧಿ ಪ್ರೌಢಿಮೆ ಬಂದಾಗ ತಿಳಿದು ನಿಷ್ಠೆಯಿಂದ ಮಾಡುವ ಕ್ರಿಯೆಗಳು. ಆದ್ದರಿಂದ ತಡವಾಯಿತಲ್ಲವೆಂದು ನಾವು ವ್ಯಥೆಪಡಬೇಕಾದ್ದಿಲ್ಲ. ಒಂದು ರೀತಿ ಒಳ್ಳೆಯದೇ. ತಿಳಿದು ಶ್ರದ್ಧಾ ನಿಷ್ಠೆಯಿಂದ ಮಾಡುವುದೇ ಉತ್ತಮ ಸಾಧನ.

ಕಾಲವೈಪರೀತ್ಯದಿಂದ ಸಾಧನ ಕ್ಷೇತ್ರಕ್ಕೆ ತಡವಾಗಿ ಬಂದವರು ನಾವು ಅಲ್ಲ. ಶ್ರೀಮನ್ಮಧ್ವಾಚಾರ್ಯರ ಪೂರ್ವಾಶ್ರಮದ ಅನುಜರಾದ – ತರುವಾಯದಲ್ಲಿ ಶ್ರೀವಿಷ್ಣುತೀರ್ಥರೆಂದು ಪ್ರಸಿದ್ಧರಾದವರೂ ಒಬ್ಬರು. ಸುಮಧ್ವವಿಜಯದ ಸರ್ಗ ೧೫ರಲ್ಲಿ ಬರತಕ್ಕ ಅವರ ಸಾಧನ ವಿಚಾರಗಳು ಸಾಕಷ್ಟು ಸ್ಫೂರ್ತಿಯನ್ನು ಕೊಡುತ್ತವೆ. ಇವರೂ ಜೀವನದಲ್ಲಿ ವಿವಿಧ ಸಾಂಸಾರಿಕ ದುಃಖದರ್ಶನದಿಂದ ವೈರಾಗ್ಯ ಹೊಂದಿ ತುರೀಯ ಆಶ್ರಮ ಪಡೆದರು. ಆದರೆ ಅವರು ಮಾಡಿದ ಸಾಧನದ ಬಗೆ ಬಹು ತೀವ್ರ ಕಠಿಣ. ಬಹುಕಾಲದಿಂದ ಶಿಷ್ಯರಾಗಿದ್ದ ಪದ್ಮನಾಭಾದಿ ಯತಿಗಳ ಆಚಾರ್ಯರ ಜೊತೆಯಲ್ಲಿದ್ದು ಜ್ಞಾನ ಭಕ್ತ್ಯತಿಶಯಗಳನ್ನು ಪಡೆದು ಪ್ರಥಮ ಶ್ರೇಣಿಯ ಶಿಷ್ಯರಾಗಿದ್ದರು. ಆದರೆ ತಡವಾಗಿ ಈ ಗುಂಪಿಗೆ ಸೇರಿದ ಶ್ರೀ ವಿಷ್ಣುತೀರ್ಥರ ದೀಕ್ಷೆ ಭಕ್ತಿ ಮನೋದಾರ್ಢ್ಯಾದಿಗಳು ಹೇಗಿದ್ದವೆಂದು ಈ ಕೆಳಗಿನ ಶ್ಲೋಕವು ತಿಳಿಸುತ್ತದೆ.

"ಚತುರೋಸೌ ಪ್ರವಚನೆ ಮನುಸಂಸಿದ್ಧಿ ಮಾನ್ಮನಃ ।
ಸಂಖ್ಯಾಮಾಂ ಪೂರಣೀಮಾಗಾನ್ಮಧ್ವದಾ ಸಮಿತಿ ವ್ಯಧಾತ್"
॥ ೧೫-೧೦೨ ॥

(ಸುಮಧ್ವವಿಜಯ)

"ಶ್ರೀವಿಷ್ಣುತೀರ್ಥರು ಮಧ್ವ ಶಾಸ್ತ್ರ ಪ್ರವಚನದಲ್ಲಿ ಚತುರರಾಗಿದ್ದರು. ಮಂತ್ರ ಸಿದ್ಧಿಗಳನ್ನು ಪಡೆದವರಾಗಿದ್ದರು. ಆದರೆ ಮಧ್ವರ ಶಿಷ್ಯರನ್ನು ಗಣನೆ ಮಾಡುವಾಗ ಇವರನ್ನು ಎರಡನೆಯವರು ಅಥವಾ ಮೂರನೆಯವರು ಎಂದು ಎಣಿಸದಿರಲಿ. ಇವರೂ ಸಹ ಶಿಷ್ಯಾಗ್ರಗಣ್ಯರೆಂದೇ ಎಣಿಸುವಂತಾಗಬೇಕೆಂದು ಮನೋ ಸಂಕಲ್ಪ ಮಾಡಿದರಷ್ಟೇ ಅಲ್ಲದೆ ಅದಕ್ಕೆ ತಕ್ಕಂತೆ ಶಾಸ್ತ್ರ ವ್ಯಾಸಂಗ ಪ್ರವಚನಗಳನ್ನು ಮಾಡಿದರು ಮತ್ತು ಕಠಿಣತರ ತಪ್ಪನ್ನಾಚರಿಸಿ ಶ್ರೀ

ಮಧ್ವರ ಕೃಪೆಗೆ ಪಾತ್ರರಾದರು." ಇವರ ದೃಢ ಭಕ್ತಿ, ಸತತ ಪರಿಶ್ರಮ, ವಿದ್ಯಾರ್ಜನ, ದೇಹದಂಡನ, ತಪಸ್ಸು, ಆಸಕ್ತಿ, ಪ್ರೀತಿ ಇತ್ಯಾದಿಗಳಿಂದ ಪ್ರೀತರಾದ ಶ್ರೀಮಧ್ವರು ಇವರಿಗೆ ಎಷ್ಟು ಅನುಗ್ರಹ ಮಾಡಿದರೆಂಬುದನ್ನು ಹೇಳಲು ಸಾಧ್ಯವಿಲ್ಲ. "ಸ ಚಿತ್ತಾದ್ವಿಷಯತ್ವಾದ್ವಾಗೋಪ್ಯ ತ್ವಾದ್ವಾನ ವರ್ಣ್ಯತೆ."

ಹೀಗೆ ನಾವು ಆಧ್ಯಾತ್ಮ ಕ್ಷೇತ್ರದಲ್ಲಿ ಸ್ವಲ್ಪ ತಡವಾಗಿ ಪ್ರವೇಶಿಸಿದರೂ ದೃಢವಾದ ಶ್ರದ್ಧಾ ಭಕ್ತಿಗಳಿಂದ ಶ್ರೀವಿಷ್ಣುತೀರ್ಥರಿಂದ ಸ್ಫೂರ್ತಿಹೊಂದಿ, ಶ್ರೀವಿಷ್ಣು ಭಕ್ತ ಪ್ರವರರಾದ ಶ್ರೀಮನ್ಮಧ್ವರ ಅನುಗ್ರಹ ಸಂಪಾದಿಸಿ ಇನ್ನೂ ಕಾಲ ವಿಳಂಬ ಮಾಡದೇ ಸಾಧನ ಕ್ಷೇತ್ರದಲ್ಲಿ ಮುಂದೆ ಸಾಗಿ ಶ್ರೀವಿಷ್ಣುವಿನ ಕೃಪಾ ಪ್ರಸಾದಕ್ಕೆ ಪಾತ್ರರಾಗುವಾ.

---------------------------------------